UASB LIBRARY
Newspaper Clippings
Pg .1 Saturday 27-03-2021 Jai Kisan





ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಅವರು ರೈತರಿಗೆ ಜೇನುಕೃಷಿ ಪರಿಕರಗಳನ್ನು ವಿತರಿಸಿದರು

'ಜೇನು ರಫ್ತಿಗೆ ವಿಪುಲ ಅವಕಾಶ'

ಪ್ರಜಾವಾಣಿ ವಾರ್ತೆ

ಯಲಹಂಕ: ಜೇನುತುಪ್ಪದಲ್ಲಿ ಕಲಬೆರಕೆ ತಡೆಗಟ್ಟುವುದರ ಜೊತೆಗೆ ಗುಣಮಟ್ಟ ಕಾಯ್ದುಕೊಂಡು ನಿರ್ದಿಷ್ಟ ಬ್ರ್ಯಾಂಡ್ ಸೃಷ್ಟಿಸಿಕೊಂಡರೆ ಹೊರರಾಜ್ಯ ಮತ್ತು ರಾಷ್ಟ್ರಗಳಿಗೆ ರಫ್ತು ಮಾಡಲು ವಿಪುಲ ಅವಕಾಶಗಳಿವೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಹೇಳಿದರು.

ಅಖಿಲಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಗಳ ಸಂಶೋಧನಾ ಪ್ರಾಯೋಜನೆ ಹಾಗೂ ಜೇನುಕೃಷಿ ವಿಭಾಗದ ಆಶ್ರಯದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಜೇನು ಸಾಕಾಣಿಕೆ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

'ಜೇನುತುಪ್ಪದಲ್ಲಿ ಕಲಬೆರಕೆ ಪದಾರ್ಥಗಳನ್ನು ಪತ್ತೆಹಚ್ಚಿ, ಗುಣಮಟ್ಟವನ್ನು ದೃಢಪಡಿಸುವ ನಿಟ್ಟಿನಲ್ಲಿ ಉತ್ಕೃಷ್ಟ ಜೇನು ಪ್ರಯೋಗಾಲಯ ಸ್ಥಾಪಿಸುವ ಸಂಬಂಧ ಅನುದಾನ ಬಿಡುಗಡೆಗಾಗಿ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

ಕೃಷಿ ವಿಶ್ವವಿದ್ಯಾಲಯದ ಹಿರಿಯ ವಿಜ್ಞಾನಿ ಡಾ.ಎಸ್.ನಿರಂಜನಮೂರ್ತಿ ಮಾತನಾಡಿ, 'ಸಮಗ್ರ ಕೃಷಿಪದ್ಧತಿಯಲ್ಲಿ ಜೇನುಕೃಷಿಯನ್ನು ಉಪಕಸುಬನ್ನಾಗಿ ಅಳವಡಿಸಿಕೊಳ್ಳುವುದರಿಂದ ಆರೋಗ್ಯಯುತ ಜೇನು ದೊರೆಯುವುದರ ಜೊತೆಗೆ ಬೆಳೆಗಳ ಇಳುವರಿಯೂ ಹೆಚ್ಚಾಗಲಿದೆ' ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಮದಕರಿ ಸೌಹಾರ್ದ ಸಹಕಾರಿ ಅಧ್ಯಕ್ಷ ಡಿ.ಎ. ನಾಗರಾಜು, ಜೇನುಕೃಷಿ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್. ಜಗದೀಶ್, ಡಾ.ಕೆ.ಟಿ. ವಿಜಯ ಕುಮಾರ್, ಸಂಪನ್ಮೂಲ ವ್ಯಕ್ತಿ ಜಿ. ಈಶ್ವರಪ್ಪ, ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎನ್. ಭಟ್, ಡಾ.ಬಿ.ಸಿ. ಕುಬೇರಪ್ಪ ಉಪಸ್ಥಿತರಿದ್ದರು.

27-03-2021 Pv 3A

ಕೃಷಿಕರಿಗಾಗಿ ಶ್ರಮಜೀವಿ ಟಿವಿ

ಬೆಂಗಳೂರು: ಶ್ರಮಜೀವಿ ಟೆಲಿವಿಷನ್ ಕರ್ನಾಟಕದ ರೈತರಿಗೋಸ್ಕರ ಕೃಷಿ ಕಾರ್ಯಕ್ರಮಗಳಿಗಾಗಿ ಒಟಿಟಿ ಟಿವಿ ಪ್ರಾರಂಭಿಸಿದೆ.

ಶ್ರಮಜೀವಿ ಟಿವಿಯ ಪ್ರಧಾನ ಸಂಪಾದಕ ಡಾ. ವೆಂಕಟ್ರಮಣ ಹೆಗಡೆ ಮಾಹಿತಿ ನೀಡುತ್ತಾ, ಅಂತರ್ಜಾಲದ ಮೂಲಕ ಈ ಟಿವಿ ಪ್ರಸಾರವಾಗುತ್ತಿದ್ದು, ಸಂಪೂರ್ಣ ಕೃಷಿ ಕಾರ್ಯಕ್ರಮಗಳಿಗಾಗಿ ಮೀಸಲಾಗಿದ್ದು, ಪ್ರಸ್ತುತ ಫಾರ್ಮ್ ಟಿವಿಯಲ್ಲಿ ಪ್ರಾಯೋಗಿಕ ಪ್ರಸಾರ ಆರಂಭವಾಗಿದೆ. ಪ್ರತಿದಿನ ಸಂಜೆ 6 ರಿಂದ 7ವರೆಗೆ ಫೇಸ್‌ಬುಕ್, ಯೂಟ್ಯೂಬ್ ನೇರ ಪ್ರಸಾರವೂ ನಡೆಯುತ್ತಿದೆ. ಒಟಿಟಿ ತಾಂತ್ರಿಕ ಪರೀಕ್ಷೆ ಮುಗಿಯುತ್ತಿದ್ದಂತೆ ಏಪ್ರಿಲ್ ಕೊನೆಯ ವಾರದಲ್ಲಿ ಎರಡು ಗಂಟೆಗಳ ಅಧಿಕೃತ ಕಾರ್ಯಕ್ರಮಗಳು



ಆರಂಭವಾಗಲಿದೆ. ಈ ಒಟಿಟಿ ಆ್ಯಪ್ ಮತ್ತು ಕಾರ್ಯಕ್ರಮ ವೀಕ್ಷಕರಿಗೆ ಸಂಪೂರ್ಣ ಉಚಿತ ಎಂದರು. ಆಸಕ್ತ ರೈತರು ಮತ್ತು ಕೃಷಿಕರು ಫಾರ್ಮ್‌ಟಿವಿ ಆ್ಯಪ್‌ನ್ನು ಬಳಸಿ ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗಳನ್ನು 9980534320 ಸಂಖ್ಯೆಗೆ ಕರೆ ಮಾಡಿ, ವಾಟ್ಸಾಪ್ ಮೂಲಕ ತಿಳಿಸಬಹುದಾಗಿದೆ. www.team@shramajeevi.com, www.shramajeevi.com,

27-03-2021 Vsv 03

For more information visit
University Library Website
Web - uasbagrilibindia.org
E-mail- librarian@uasbangalore.edu.in

"Discipline is the bridge between goals and accomplishment"

UASB
LIBRARY
Newspaper Clippings
Pg .2 Saturday 27-03-2021 Jai Kisan



ಜೇನು ಕೃಷಿಗೆ ವೈಜ್ಞಾನಿಕ ಸ್ಪರ್ಶ ನೀಡಿ : ಡಾ.ರಾಜೇಂದ್ರ ಪ್ರಸಾದ್

ಬೆಂಗಳೂರು: ಸಾಂಪ್ರದಾಯಿಕ ಜೇನು ಕೃಷಿಗೆ ವೈಜ್ಞಾನಿಕ ಸ್ಪರ್ಷ ನೀಡುವ ಮೂಲಕ ಜೇನು ಕೃಷಿಕರು ಹೆಚ್ಚಿನ ಲಾಭ ಗಳಿಸಬಹುದು ಎಂದು ಬೆಂಗಳೂರು ಕೃಷಿ ವಿ.ವಿ.ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ತಿಳಿಸಿದರು..

ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಅಖಿಲ ಭಾರತ ಸುಸಂಘಟಿತ ಜೇನು ನೊಣ ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ ಹಾಗೂ ಬೆಂ.ಕೃಷಿ ವಿ.ವಿ.ಯ ಜೇನು ಕೃಷಿ ವಿಭಾಗದ ಸಹಯೋಗ ದೊಂದಿಗೆ ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ ಜೇನು ಸಾಕಾಣಿಕೆ ತರಬೇತಿ ಮತ್ತು ಜೇನು ಕೃಷಿ ಪರಿಕರಗಳ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಜೇನು ಕೃಷಿಯನ್ನು ಹೆಚ್ಚಿನ ರೈತರು ಸಮಗ್ರ ಕೃಷಿ ಪದ್ಧತಿಯ ಅಡಿಯಲ್ಲಿ ಒಂದು ಉಪಕಸುಬಾಗಿ ಪರಿಗಣಿಸಿದ್ದು, ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲೇ ಜೇನು ಕೃಷಿ ಕೈಗೊಂಡಿದ್ದಾರೆ. ಆದರೆ ಜೇನು ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡರೆ ಹೆಚ್ಚಿನ ಇಳುವರಿ ಪಡೆಯುವ ಮೂಲಕ ಹೆಚ್ಚು ಲಾಭ ಗಳಿಸಬಹುದಾಗಿದೆ.ಜೇನು ಕೃಷಿಕರಿಗೆ ಅಗತ್ಯ ಸಹಕಾರ ಮತ್ತು



ಜೇನು ಸಾಕಾಣಿಕೆ ತರಬೇತಿ ಮತ್ತು ಜೇನು ಕೃಷಿ ಪರಿಕರಗಳನ್ನು ಬೆಂಗಳೂರು ಕೃಷಿ ವಿ.ವಿ.ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ವಿತರಿಸಿದರು.

ಸಲಹೆ ನೀಡಲು ಬೆಂ.ಕೃಷಿ ವಿ.ವಿ.ಯ ವಿಜ್ಞಾನಿಗಳು ಸದಾ ಸಿದ್ಧರಿದ್ದಾರೆ, ಇದರ ಸದುಪಯೋಗವನ್ನು ಜೇನು ಕೃಷಿಕರು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜೇನು ಸಾಕಾಣಿಕೆ ತರಬೇತಿ ಪಡೆದ ಜೇನು ಕೃಷಿಕರಿಗೆ ಜೇನು ಸಾಕಣೆ ಪೆಟ್ಟಿಗೆ, ಜೇನು ಸಂಸ್ಕರಣೆ ಯಂತ್ರ, ಹಗ್ಗ ಮುಂತಾದ ಜೇನು ಕೃಷಿ ಪರಿಕರಗಳನ್ನು ವಿತರಿಸಲಾಯಿತು.ಬೆಂಗಳೂರು ಕೃಷಿ ವಿ.ವಿ. ಸಹ ಸಂಶೋಧನಾ ನಿರ್ದೇಶಕ ಡಾ.ಎಸ್ .ನಿರಂಜನಮೂರ್ತಿ,ಜೇನು ಕೃಷಿ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಎಸ್.ಭಟ್, ಡಾ.ಜಿ.ಸಿ.ಕುಬೇರಪ್ಪ, ಬೆಂ.ಕೃಷಿ ವಿ.ವಿ. ಜೇನು ಕೃಷಿ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಕೆ. ಎಸ್.ಜಗದೀಶ್, ಅಖಿಲ ಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆಯ ವಿಜ್ಞಾನಿ ಮತ್ತು ಯೋಜನಾ ಮುಖ್ಯಸ್ಥ ಡಾ.ಕೆ.ಟಿ.ವಿಜಯಕುಮಾರ್, ಮದಕರಿ ಸೌಹಾರ್ದ ಸಹಕಾರಿ ನಿಯಮಿತ,ರಂಗಸಮುದ್ರ ಅಧ್ಯಕ್ಷ ಡಿ.ಎ.ನಾಗರಾಜು, ಪ್ರಾಧ್ಯಾಪಕ ಡಾ. ಈಶ್ವರಪ್ಪ, ಡಾ.ಶ್ವೇತ, ಡಾ.ನಯಿಮಾಬಾನು, ಜಿ. ಸಂತೋಷ್ ಕುಮಾರ್ ಇದ್ದರು.

27-03-2021
Vsv Pg 02

ಆನ್‌ಲೈನ್‌ನಲ್ಲೇ ಥರಾವರಿ ಮ್ಯಾಂಗೋ | ಬೋರ್ಡ್‌ನಿಂದ ಅನುಮತಿ ಬಾಕಿ

ಮಾವು ಮಾರಾಟಕ್ಕೆ ಅಮೆಜಾನ್ ಎಂಟ್ರಿ

■ ಆರ್.ಶ್ರೀಧರ್ ರಾಮನಗರ
shridharreporter@gmail.com

ಹಣ್ಣುಗಳ ರಾಜನ ಮಾರಾಟ ಸೀಸನ್ ಬಂದೇಬಿಟ್ಟಿದೆ. ಮಾವುಗಳ ಮಾರಾಟಕ್ಕೆ ಮಾರುಕಟ್ಟೆಯೂ ಸಜ್ಜಾಗುತ್ತಿದೆ. ಆನ್‌ಲೈನ್‌ನಲ್ಲೂ ಮಾವುಗಳ ಮೇಳ ಕಳೆಗಟ್ಟುವುದು ಈ ಬಾರಿಯ ಸ್ಪೆಷಲ್. ಇ-ಕಾಮರ್ಸ್ ದೈತ್ಯ ಕಂಪನಿ ಅಮೆಜಾನ್ ಆನ್‌ಲೈನ್‌ನಲ್ಲಿ ಮಾವು ಮಾರಾಟಕ್ಕೆ ತಯಾರಾಗಿದೆ. ಇದಕ್ಕಾಗಿ ಕಂಪನಿ ಕೆಲವು ಷರತ್ತುಗಳನ್ನು ಮುಂದಿಟ್ಟಿದ್ದು, ಅವಿನ್ನೂ ಅಂಗೀಕಾರವಾಗಬೇಕಿದೆ.

ಇಡೀ ರಾಜ್ಯದಲ್ಲಿ ಮಾರುಕಟ್ಟೆಗೆ ಮಾವು ಮೊದಲು ಬರುವುದು ರಾಮನಗರ ಜಿಲ್ಲೆಯಿಂದ. ವರ್ಷಕ್ಕೆ ಸುಮಾರು 2 ಲಕ್ಷ ಮೆಟ್ರಿಕ್ ಟನ್ ಮಾವು ಉತ್ಪಾದನೆ ಜಿಲ್ಲೆಯಲ್ಲಾಗುತ್ತದೆ. ಇದರಲ್ಲಿ ಶೇ.90ರಷ್ಟು ಮಾವು ಹೊರ ರಾಜ್ಯ ಮತ್ತು ಹೊರ ದೇಶಗಳಿಗೆ ಪೂರೈಕೆಯಾಗುತ್ತದೆ. ಆದರೆ, ಇಲ್ಲೆಲ್ಲ ಮಧ್ಯವರ್ತಿಗಳ ಹಾವಳಿ ಹೆಚ್ಚಿದ್ದರಿಂದ ಮಾವು ಬೆಳೆದವರಿಗೆ ಇದರ ಲಾಭ ದಕ್ಕುತ್ತಿದ್ದದ್ದು ಅಷ್ಟಕ್ಕಷ್ಟೇ.

ಮಧ್ಯವರ್ತಿಗಳ ಹಾವಳಿ ತಪ್ಪಿಸಿ ರೈತರಿಂದ-ಗ್ರಾಹಕರಿಗೆ ಮಾವನ್ನು ತಲುಪಿಸಲು ಅಮೆಜಾನ್ ಅಖಾಡಕ್ಕಿಳಿದೆ. ರೈತರಿಂದ ಮಾವು ಖರೀದಿಸಿ ಮಾರಾಟ ಮಾಡಲು ಸಿದ್ಧತೆ ಮಾಡಿಕೊಂಡಿದೆ. ಇದಕ್ಕಾಗಿ ಸರಕಾರಕ್ಕೆ ಕೆಲವು ಷರತ್ತುಗಳನ್ನು ವಿಧಿಸಿದೆ. ಶೇ.4.5ರಷ್ಟು ಸೇವಾ ಶುಲ್ಕವನ್ನು ಪಡೆದುಕೊಳ್ಳುವ ಕಂಪನಿ ಮಾವು ಮಾರಾಟದ ಹಣವನ್ನು 15 ದಿನದೊಳಗೆ ರೈತರ ಖಾತೆಗೆ ಜಮೆ ಮಾಡಲಿದೆ.

ಮಾರಾಟ ಹೇಗೆ?

ಮಾವು ಬೆಳೆಗಾರರ ಬಳಿಯೇ ಎಫ್‌ಪಿಒಗಳು ಬಂದು ಮಾವು ಖರೀದಿಸಿ, ಪ್ಯಾಕಿಂಗ್ ಮಾಡಲಿವೆ. ಇಲಾಖೆ ಹೇಳುವಂತೆ ಹಣ್ಣಿನ ಗುಣಮಟ್ಟ ಆಧರಿಸಿ, ಮೂರು ಹಂತಗಳಲ್ಲಿ ಮಾವುಗಳ ಅಮೆಜಾನ್ ಕಂಪನಿಯು ಹಣ್ಣು ಖರೀದಿಸಿ ಮಾರಾಟ ಮಾಡಲಿದೆ. ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟವಾಗುವ ದರದಲ್ಲಿ ಶೇ.4.5ರಷ್ಟು (100 ರೂ.ಗಳಲ್ಲಿ 4.5 ರೂ.) ಸೇವಾ ಶುಲ್ಕವನ್ನು ಕಂಪನಿ ಪಡೆಯಲಿದೆ. ಇನ್ನುಳಿದ ಹಣವನ್ನು ಮಾರಾಟಗಾರರ ಖಾತೆಗೆ ಜಮೆ ಮಾಡಲಿದೆ.



ಅಮೆಜಾನ್ ಷರತ್ತುಗಳೇನು?

ರೈತ ಉತ್ಪಾದನಾ ಸಂಸ್ಥೆಗಳ (ಎಫ್‌ಪಿಒ) ಮೂಲಕ ಮಾವು ಖರೀದಿ ಮಾಡಲಿರುವ ಅಮೆಜಾನ್ ಕಂಪನಿಗೆ ಎಫ್‌ಎಸ್‌ಎಸ್‌ಐ (ಗುಣಮಟ್ಟ) ಲೈಸೆನ್ಸ್ ನೀಡಬೇಕು.

ರಾಸಾಯನಿಕ ಮುಕ್ತವಾಗಿ ಮಾವನ್ನು ಹಣ್ಣು ಮಾಡಲಾಗಿದೆ ಎಂಬುದಕ್ಕೆ ಮಾರಾಟಗಾರರು ಲ್ಯಾಬ್ ವರದಿ ನೀಡುವುದೂ ಕಡ್ಡಾಯ.

ಮಾವಿನ ಗುಣಮಟ್ಟ, ಮಾರಾಟಗಾರರಿಂದ ಒಪ್ಪಿಗೆ ಪತ್ರ , ಮಾವು ಪ್ಯಾಕಿಂಗ್‌ಗೆ ಸಂಬಂಧ ಹೌಸ್ ಮಾಹಿತಿ, ಜಿಎಸ್‌ಟಿ ಸರ್ಟಿಫಿಕೆಟ್ ನೀಡಬೇಕು.

ಗ್ರಾಹಕರಿಗೆ ಮಾವು ಮಾರಾಟ ಮಾಡಿದ ಬಳಿಕ ಮಾವಿನ ಗುಣಮಟ್ಟದ ಬಗ್ಗೆ ದೂರುಗಳು ಬಂದರೆ ಮಾವು ಬೆಳೆಗಾರರನ್ನು ನೇರವಾಗಿ ಸಂಪರ್ಕಿಸುವ ಕೆಲಸವನ್ನು ಎಫ್‌ಪಿಒಗಳೇ ಮಾಡಬೇಕು.

ಅಮೆಜಾನ್ ಕಂಪನಿಯ ಷರತ್ತುಗಳನ್ನು ಒಪ್ಪುವುದು ಮತ್ತು ಕೆಲ ಬದಲಾವಣೆ ಸಂಬಂಧ ಚರ್ಚೆ ನಡೆಯುತ್ತಿದೆ. ಮ್ಯಾಂಗೊ ಬೋರ್ಡ್ ಹಾಗೂ ನಮ್ಮ ಇಲಾಖೆ ಸಮ್ಮತಿ ಬಳಿಕ ಮಾರಾಟಗಾರರಿಗೆ ಅಮೆಜಾನ್ ಮಾರುಕಟ್ಟೆ ಲಭ್ಯವಾಗಲಿದೆ. ಇದು ಎಲ್ಲ ಜಿಲ್ಲೆಗಳಿಗೂ ಅನ್ವಯಿಸಲಿದ್ದು, ಎಫ್‌ಪಿಒಗಳ ಮೂಲಕ ಮಾರಾಟ ವ್ಯವಸ್ಥೆ ನಡೆಯಲಿದೆ.

-ಮುನೇಗೌಡ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಮನಗರ

ಅಮೆಜಾನ್ ಸೇರಿದಂತೆ ಆನ್‌ಲೈನ್ ಮಾರುಕಟ್ಟೆ ನಡೆಸುವ ಕಂಪನಿಗಳು ನಮ್ಮೊಂದಿಗೆ ಮಾತುಕತೆ ನಡೆಸಿವೆ. ಕೆಲವೊಂದು ಷರತ್ತುಗಳನ್ನು ವಿಧಿಸಲಾಗಿದೆ. ಈ ಎಲ್ಲವನ್ನು ಅಂಗೀಕರಿಸುವ ಬಗ್ಗೆ ಕೊನೆಯ ಹಂತದ ಚಿಂತನೆಯಲ್ಲಿದ್ದೇವೆ. ಎಫ್‌ಪಿಒಗಳು ಸಹ ಒಪ್ಪಿಕೊಂಡಿವೆ. ಇದರಿಂದಾಗಿ ಮಾವು ಬೆಳೆಗಾರರಿಗೂ ಅನುಕೂಲವಾಗಲಿದೆ. ಜತೆಗೆ ಗ್ರಾಹಕರಿಗೂ ಗುಣಮಟ್ಟದ ಮಾವು ಸಿಗಲಿದೆ.

-ಸಿ.ಜಿ.ನಾಗರಾಜು ವ್ಯವಸ್ಥಾಪಕ ನಿರ್ದೇಶಕರು, ಮ್ಯಾಂಗೊ ಬೋರ್ಡ್

27-03-2021
Vk Pg 1B